




## ಕವಿಗಳ ವರ್ಣನೆ..

ಟಿಪ್ಪೂನ ಯಂತ್ರ ಹುಲಿ ಕವಿ, ಕಲಾವಿದರನ್ನು ಆಕರ್ಷಿಸಿದೆ. ಲೀಡೆನ್‌ಹಾಲ್ ರಸ್ತೆಯ ಮ್ಯೂಸಿಯಂನಲ್ಲಿ ಅದನ್ನು ಕಂಡ ಜಾನ್ ಕೀಟ್ಸ್ ೧೮೧೯ರಲ್ಲಿ ತನ್ನ 'ದ ಕ್ಯಾಪ್ ಅಂಡ್ ಬೆಲ್ಸ್' ಪದ್ಯದಲ್ಲಿ ಆ ಯಂತ್ರ ಹುಲಿಯನ್ನು ಉಲ್ಲೇಖಿಸಿದ್ದಾನೆ. ಶಮನಕಾರಕನೊಬ್ಬ ದೊರೆ ಎಲ್ಫಿನಾನ್ ಅರಮನೆಗೆ ಹೋದಾಗ ವಿಚಿತ್ರ ಶಬ್ದ ಕೇಳಿ ಅದು ದೊರೆಯ ಗೊರಕೆಯಿರಬೇಕು ಎಂದುಕೊಳ್ಳುತ್ತಾನೆ. ಆದರೆ ಅಲ್ಲಿನ ಸೈನಿಕ ಹೇಳುತ್ತಾನೆ:

'ಆ ಗುಯ್ಯುಗುಡುವ ಶಬ್ದ...
ರಾಜನ ಮೆಚ್ಚಿನ ಆಟಿಕೆ
ಆಟಿಕೆಗಳಲ್ಲೆಲ್ಲಾ ಸುಂದರವಾದ ಮಾನವ ಹುಲಿ ಸಂಗೀತವಾದ್ಯದಿಂದ...'

ಫ್ರೆಂಚ್ ಕವಿ ಆಗಸ್ಟ್ ಬಾರ್ಬಿಯರ್ ೧೯೩೭ರ ತನ್ನ 'ಲ ಜೌಜು ದು ಸುಲ್ತಾನ್ (ಸುಲ್ತಾನನ ಆಟಿಕೆ) ಪದ್ಯದಲ್ಲಿ ಯಂತ್ರ ಹುಲಿಯ ಕಾರ್ಯವೈಖರಿಯನ್ನು ವರ್ಣಿಸಿದ್ದಾನೆ. ೧೯೬೭ರಲ್ಲಿ ಅಮೆರಿಕದ ಆಧುನಿಕ ಕವಯಿತ್ರಿ ಮರಿಯಾನ್ ಮೂರ್ ಸಹ ಯಂತ್ರ ಹುಲಿಯನ್ನು ವರ್ಣಿಸಿದ್ದಾಳೆ.

ಮತ್ತು ಮಗುವಿನ ಮೇಲೆ ದಾಳಿ ಮಾಡುತ್ತಿರುವಂತೆ ಹಾಗೂ ಆ ಹುಲಿಯ ಮೇಲೆ ಸಿಂಹವೊಂದು ದಾಳಿ ಮಾಡುತ್ತಿರುವಂತೆ ಚಿತ್ರಿಸಿ ಅದಕ್ಕೆ 'ದಿ ಬ್ರಿಟಿಷ್ ಲಯನ್ಸ್ ವೆನೆಜಿಯನ್ಸ್ ಆನ್ ಬೆಂಗಾಲ್ ಟೈಗರ್' (ಬಂಗಾಳದ ಹುಲಿಯ ಮೇಲೆ ಬ್ರಿಟಿಷ್ ಸಿಂಹ ಸೇಡು ತೀರಿಸಿಕೊಳ್ಳುತ್ತಿರುವುದು) ಎಂಬ ಶೀರ್ಷಿಕೆ ನೀಡಿ ಭಾರತೀಯರನ್ನು ಕಾಪಾಡುವುದು ಬ್ರಿಟಿಷರಿಂದಲೇ ಸಾಧ್ಯವೆನ್ನುವಂತೆ ತೋರಿಸಿದ್ದರು.

1799ರಲ್ಲಿ ಟಿಪ್ಪೂನನ್ನು ಕೊಂದ ನಂತರ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯವರು ಟಿಪ್ಪೂನ ಖಜಾನೆಯನ್ನು ಲೂಟಿ ಮಾಡಿ ಹಂಚಿಕೊಂಡರು. ಅಷ್ಟೇ ಅಲ್ಲದೆ ಊರಿಗೂ ನುಗ್ಗಿ ಅಲ್ಲಿನ ಜನರ ಸಂಪತ್ತನ್ನೂ ಸಹ ಲೂಟಿ ಮಾಡಿದರು. ಟಿಪ್ಪೂವಿನ ಚಿನ್ನದ ಹುಲಿಯ ತಲೆಯ ಆಕೃತಿಗಳಿದ್ದ ಸಿಂಹಾಸನವನ್ನು ಅಲ್ಲಿಯೇ ಮುರಿದು ಹಂಚಿಕೊಂಡರು. ಕೆಲವು ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಂನಲ್ಲಿ ಇಂದಿಗೂ ಇವೆ.

ಟಿಪ್ಪೂನ ಭವ್ಯವಾದ ಸಿಂಹಾಸನ ಹೇಗಿತ್ತೆಂಬುದನ್ನು ನಾವಿಂದು ಚಿತ್ರಗಳಲ್ಲಿ ಮಾತ್ರ ನೋಡಬಹುದು. ಹುಲಿಯ ತಲೆಗಳಿದ್ದ ಆನೆಯ ಮೇಲೆ ಸವಾರಿ ಮಾಡಲು ಬಳಸುತ್ತಿದ್ದ ಟಿಪ್ಪೂನ ಹೌದಾ ಮಾತ್ರ ಇಂದು ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಪ್ರದರ್ಶನಕ್ಕಿದೆ. ಶ್ರೀರಂಗಪಟ್ಟಣವನ್ನು ಕೊಳ್ಳೆಹೊಡೆದ ಬ್ರಿಟಿಷರು ಟಿಪ್ಪೂವಿನ ಮರದಿಂದ ತಯಾರಿಸಿದ ಯಂತ್ರ ಹುಲಿಯನ್ನು ಲಂಡನ್ನಿಗೆ ಕೊಂಡೊಯ್ದರು. ಈಸ್ಟ್ ಇಂಡಿಯಾ ಕಂಪೆನಿಯ ಗವರ್ನರ್ ಜನರಲ್ ರಿಚರ್ಡ್ ವೆಲ್ಲೆಸ್ಲಿಯ ಸಹಾಯಾಧಿಕಾರಿ ಆ ಯಂತ್ರ ಹುಲಿಯ ಬಗ್ಗೆ ತನ್ನ ಟಿಪ್ಪಣಿಯೊಂದರಲ್ಲಿ ಹೀಗೆ ಬರೆದಿದ್ದಾನೆ:

'ಸಂಗೀತ ವಾದ್ಯಗಳಿರುವ ಕೋಣೆಯೊಂದರಲ್ಲಿ ಈ ವಿಶಿಷ್ಟ ವಸ್ತು ಕಂಡುಬಂತು. ಇದು ಇಂಗ್ಲಿಷರ ಬಗೆಗಿನ ಟಿಪ್ಪೂ ಸಾಬ್‌ರವರ ವಿಪರೀತ ದ್ವೇಷ ಮತ್ತು ಅಸಹನೆಯ ಮತ್ತೊಂದು ಕುರುಹಾಗಿದೆ. ಇದು ಅಂಗಾತ ಮಲಗಿರುವ ಯೂರೋಪಿಯನ್ನನೊಬ್ಬನನ್ನು ತಿನ್ನುತ್ತಿರುವ ಹುಲಿಯ ಯಂತ್ರವಾಗಿದೆ. ಹುಲಿಯ ದೇಹದಲ್ಲಿ ಸಂಗೀತ ವಾದ್ಯವೊಂದರ ಭಾಗಗಳೂ ಇವೆ. ಅದರಿಂದ ಉಂಟಾಗುವ ಶಬ್ದಗಳು ನೋವಿನಲ್ಲಿನ ವ್ಯಕ್ತಿಯೊಬ್ಬನ ಕೂಗಿನಂತೆಯೂ ಹಾಗೂ ಹುಲಿಯ ಘರ್ಜನೆಯಂತೆಯೂ ಕೇಳಿಬರುತ್ತವೆ. ಇದನ್ನು ಎಷ್ಟು ಚಾಣಾಕ್ಷತೆಯಿಂದ ತಯಾರಿಸಲಾಗಿದೆಯೆಂದರೆ, ಸಂಗೀತ ವಾದ್ಯದಂತೆ ನುಡಿಸುವಾಗ ಕೆಳಗೆ ಬಿದ್ದ ವ್ಯಕ್ತಿ ಅಸಹಾಯಕತೆಯಿಂದ, ದೈನ್ಯತೆಯಿಂದ ಕೈ ಮೇಲೆತ್ತಿರುತ್ತಾನೆ. ಟಿಪ್ಪೂ ಸುಲ್ತಾನನ ಅಹಂಕಾರ ಮತ್ತು ಹೀನಾಯ ಕ್ರೌರ್ಯದ ಈ ನಿರ್ಮಾಣ ಟವರ್ ಆಫ್ ಲಂಡನ್ನಿನಲ್ಲಿ ಇಡಲು ಸೂಕ್ತವಾಗಿದೆ.'

### ಮ್ಯೂಸಿಯಂನಲ್ಲಿ...

ಲಂಡನ್ನಿಗೆ ಕೊಂಡೊಯ್ದ ಬ್ರಿಟಿಷರು ಟಿಪ್ಪೂನ ಯಂತ್ರ ಹುಲಿಯನ್ನು ಈಸ್ಟ್ ಇಂಡಿಯಾ ಕಂಪೆನಿಯ ಭಾರತೀಯ ಮ್ಯೂಸಿಯಂನಲ್ಲಿ ಪ್ರದರ್ಶಿಸಿದರು. ಕೆಲವೇ ದಿನಗಳಲ್ಲಿ ಅದು ಹೆಚ್ಚು ಜನಪ್ರಿಯವಾಗಿ ಬ್ರಿಟಿಷ್ ಜನ ಅದನ್ನು ನೋಡಲು ಮುಗಿಬಿದ್ದರು. 1858ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯನ್ನು ಬ್ರಿಟಿಷ್ ಸರ್ಕಾರವು ತನ್ನ ಸುಪರ್ದಿಗೆ ತೆಗೆದುಕೊಂಡಾಗ ಯಂತ್ರ ಹುಲಿಯನ್ನು 1868ರವರೆಗೂ ವೈಟ್‌ಹಾಲ್‌ನ ಫಿಫೆ ಹೌಸ್‌ನಲ್ಲಿರಿಸಲಾಗಿತ್ತು. ನಂತರ ಹೊಸ ಇಂಡಿಯಾ ಆಫೀಸ್‌ಗೆ ಸ್ಥಳಾಂತರಿಸಲಾಯಿತು. 1874ರಲ್ಲಿ ಅದನ್ನು ಸೌತ್ ಕೆನ್ಸಿಂಗ್ಟನ್‌ನಲ್ಲಿನ ಇಂಡಿಯಾ ಮ್ಯೂಸಿಯಂಗೆ ವರ್ಗಾಯಿಸಿ 1879ರಲ್ಲಿ ಅದನ್ನೂ ಸಹ ಮುಚ್ಚಿದಾಗ ಅಲ್ಲಿದ್ದ ವಸ್ತುಗಳನ್ನೆಲ್ಲಾ ಇತರ ಮ್ಯೂಸಿಯಂಗಳಿಗೆ ನೀಡಲಾಯಿತು.

ಈಗ ಈ ಹುಲಿ ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಂನಲ್ಲಿ ರಾರಾಜಿಸುತ್ತಿದೆ. ಲಂಡನ್ ತಲುಪಿದ ದಿನದಿಂದ ಇಂದಿಗೂ ಅದು ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸುತ್ತಿದೆ. ಎರಡನೇ ಮಹಾ ವಿಶ್ವಯುದ್ಧದಲ್ಲಿ ಜರ್ಮನಿಯ ಬಾಂಬ್ ದಾಳಿಗೊಳಗಾಗಿ ಕಟ್ಟಡ ಕುಸಿತದಿಂದ ಯಂತ್ರ ಹುಲಿ ಚೂರುಚಾರಾಗಿದ್ದು ಅದನ್ನು ದುರಸ್ತಿಗೊಳಿಸಿ 1947ರಿಂದ ಗಾಜಿನ ಪೆಟ್ಟಿಗೆಯೊಂದರಲ್ಲಿ ಸುರಕ್ಷಿತವಾಗಿ ಪ್ರದರ್ಶನದಲ್ಲಿದೆ. 1955ರಲ್ಲಿ ಅದು ಅಮೆರಿಕಾಗೆ ಸಹ ಪ್ರಯಾಣಿಸಿ ನ್ಯೂಯಾರ್ಕ್‌ನ ಮ್ಯೂಸಿಯಂ ಆಫ್ ಮಾಡರ್ನ್ ಆರ್ಟ್‌ನಲ್ಲಿ ಪ್ರದರ್ಶಿಸಲ್ಪಟ್ಟಿತ್ತು.

ಲಂಡನ್ನಿನ ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಂನಲ್ಲಿ ಇಂದಿಗೂ ಅದಕ್ಕೆ ಮಹತ್ತರ ಸ್ಥಾನವಿದೆ. ಅಲ್ಲಿಗೆ ಭೇಟಿ ನೀಡುವ ಪ್ರತಿಯೊಬ್ಬರೂ ಅದನ್ನು ನಿಬ್ಬೆರಗಾಗಿ ನೋಡುತ್ತಾರೆ. ಮ್ಯೂಸಿಯಂಗೆ ದೇಣಿಗೆ ಕೇಳುವ ಪೋಸ್ಟರಿನಲ್ಲಿಯೂ ಅದರದೇ ಚಿತ್ರವನ್ನು ಹಾಕಿಕೊಂಡಿದ್ದಾರೆ. ಆ ಹುಲಿಯ ಪೋಸ್ಟ್ ಕಾರ್ಡ್‌ಗಳು, ಬೊಂಬೆಗಳು ಮುಂತಾದವುಗಳನ್ನು ಅಲ್ಲಿ ಮಾರಾಟ ಮಾಡುತ್ತಾರೆ. ಈಗ ಜನ ಅದನ್ನು ನೋಡಬೇಕಷ್ಟೆ. ಆದರೆ, ಮೊದಲು ಜನರಿಗೆ ಅದನ್ನು ಮುಟ್ಟಲು ಹಾಗೂ ಕೀಲಿ ತಿರುಗಿಸಿ ಹುಲಿಯ ಘರ್ಜನೆಯನ್ನು ಮತ್ತು ಕೆಳಗೆ ಬಿದ್ದಿರುವ ಬ್ರಿಟಿಷನ ಆಕ್ರಂದನವನ್ನು ಕೇಳುವ ಅವಕಾಶವಿತ್ತು.